## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ : 19-10-2022

### ಬೇಮಳಖೇಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 53/2022 ಕಲಂ 302, 201 ಐಪಿಸಿ :-

ದಿನಾಂಕ:18-10-2022 ರಂದು ಮುಂಜಾನೆ 0600 ಗಂಟೆಯ ಸುಮಾರಿಗೆ ದೇವಗಿರಿ ತಾಂಡಾ (ಎ) ಗ್ರಾಮದಿಂದ ತಾರಾಸಿಂಗ ಇತನ ಕೊಲೆಯಾದ ಬಗ್ಗೆ ಅದೇ ತಾಂಡಾದ ಅನೀಲ ಪವಾರ ಇತನು ಮಾಹಿತಿ ತಿಳಿಸಿದ ಮೇರೆಗೆ ಭರತ ಎ ಎಸ್ ಐ ದೇವಗಿರಿ ತಾಂಡಾಕ್ಕೆ ಭೇಟಿ ನೀಡಿ ಗುನ್ನೆ ಜಾಗೆ ಪರಿಶಿಲಿಸಿ ಗುನ್ನೆ ಜಾಗೆಯಲ್ಲಿ ಹಾಜರಿದ್ದ ಮೃತ ತಾಯಿಯಾದ ಫಿರ್ಯಾದಿ ಶ್ರೀ ಮತಿ ಭೀಮಣಿಬಾಯಿ ಗಂಡ ಅಂಬಾದಾಸ ಪವಾರ ಇವರ ಹೇಳಿಕೆ ಪಡೆದುಕೊಂಡಿದ್ದರ ಸಾರಾಂಶವೆನಂದರೆ ಇವರಿಗೆ ಒಬ್ಬಳು ಹೆಣ್ಣು ಮಗಳು ಮತ್ತು ಒಬ್ಬ ಗಂಡು ಮಗನಿದ್ದು ಮಗಳಾದ ಲಲಿತಾ ಇವಳಿಗೆ ಗೌಂದಲಶಾ ತಾಂಡದ ವಿಜಯಕುಮಾರ ಎಂಬುವವಿಗೆ ಮದುವೆ ಮಾಡಿಕೊಟ್ಟಿದ್ದು ಮಗನಾದ ತಾರಾಶಿಮಗ ಇತನಿಗೆ ಮದುವೆಯಾಗಿರುವದಿಲ್ಲಾ. ಅವನು ಫಿರ್ಯಾದಿ ಜೋತೆ ತಾಂಡಾದಲ್ಲಿಯೇ ವಾಸವಾಗಿರುತ್ತಾನೆ ಮಗನಾದ ತಾರಾಸಿಂಗ್ ಇತನು ದಿನಾಲು ಸರಾಯಿ ಕುಡಿದು ಬಂದು ಜಗಳ ತಕರಾರು ಮಾಡುತ್ತಿದ್ದನು ಅವನಿಗೆ ಜಗಳಮಾಡುವದು ಸರಿ ಅಲ್ಲಾ ಅಂತಾ ಹೇಳಿದರು ಸಹಸರಾಯಿ ಕುಡಿಯುವದು ಬಿಟ್ಟಿರಲ್ಲಿಲ್ಲಾ ಹಿಗಿರುವಾಗ ದಿನಾಂಕ:17-10-2022 ರಂದು ರಾತ್ರಿ 2230 ಗಂಟೆಯ ಸುಮಾರಿಗೆ ಮಗನಾದ ತಾರಾಸಿಂಗ ಇತನು ಸರಾಯಿ ಕುಡಿದು ಬಂದು ಮೈದುನನಾದ ಪ್ರೆಮಸಿಂಗ್ ಇತನ ಜೊತೆಯಲ್ಲಿ ಹೊಲ ಹಂಚಿಕೆಯ ವಿಷಯವಾಗಿ ಜಗಳ ಮಾಡಿಕೊಂಡು ಮನೆಗೆ ಬಂದು ಫಿರ್ಯದಿಯ ಜೋತೆ ಜಗಳಮಾಡುತ್ತಿದ್ದರಿಂದ ಫಿರ್ಯಾದಿಯು ಮನೆಯಿಂದ ಹೊರಗಡೆ ಹೋಗಿರುತ್ತಾರೆ ನಂತರ ಮಗ ಮನೆಯಲ್ಲಿ ಮಲಗಿಕೊಂಡಿರುತ್ತಾನೆ ನಂತರ ದಿನಾಂಕ:18-10-2022 ರಂದು ಮಧ್ಯ ರಾತ್ರಿ 01-30 ಗಂಟೆಗೆ ಮನೆಗೆ ಬಂದು ಮಗನು ಮಲಗಿಕೊಂಡ ಕೊಣೆಯಲ್ಲಿ ಹೋಗಿ ನೋಡಲಾಗಿ ಮಗನು ಹೊರಸಿನ ಮೇಲೆ ಮೃತಪಟ್ಟಿದ್ದು ಇರುತ್ತದೆ ಮೃತ ದೇಹವನ್ನು ಪರಿಶಿಲಿಸಿ ನೋಡಲು ಮಗನ ಕುತ್ತಿಗೆಗೆ ಯಾವುದೋ ಆಯುಧದಿಂದ ಕತ್ತರಿಸಿದ್ದು ಇರುತ್ತದೆ ಮಗನ ಬಟ್ಟೆಗೆಳಿಗೆ ಮತ್ತು ಹೊರಸಿನ ಮೇಲೆ ಇರುವ ಚಾಪೆಗೆ ರಕ್ತ ಹತ್ತಿದ್ದು ಇರುತ್ತದೆ. ಕಾರಣ ದಿನಾಂಕ: 17-10-2022 ರಂದು ರಾತ್ರಿ 11-00 ಗಂಟೆಯಿಂದ ದಿನಾಂಕ:18-10-2022 ರಂದು ರಾತ್ರಿ 0130 ಎ ಎಂ ಗಂಟೆಯ ಅವಧಿಯಲ್ಲಿ ಯಾರೋ ಅಪರಿಚಿತರು ಯಾವುದೋ ಉದ್ದೇಶಕ್ಕಾಗಿ ಮನೆಗೆ ಬಂದು ನನ್ನ ಮಗನು ಮಲಗಿಕೊಂಡ ಕೊಣೆಯಲ್ಲಿ ಹೋಗಿ ಕುತ್ತಿಗೆ ಕತ್ತರಿಸಿ ಕೊಲೆ ಮಾಡಿ ಕೊಲೆ ಮಾಡಿದ ಆಯುಧ ತೆಗೆದುಕೊಂಡು ಹೋಗಿ ಸಾಕ್ಷಿನಾಶಮಾಡಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.